District Legal Services Authority, Davangere
District Administration, Davangere
Department of School Education
Karnataka State Pollution Control Board, Davangere
The Institution of Engineers (India) Davangere Local Centre
Bapuji Institute of Engineering and Technology, Davangere

Jointly Observe

# WORLD ENVIRONMENT DAY- 2023

On the Theme

## "Solution for Plastic Pollution"

05.06.2023

## Plantation Programme

(Tme: 9.00 AM to 9.30 AM)

Parisara Jagruti Jatha
Time: 7.30 AM
Place : Gundi Circle

## Stage Programme

**Date: 05.06.2023** **Venue: SSM Cultural Centre, BIET Campus** **Time: 10.00 AM**

| | | |
|---|---|---|
| **Inauguration By** | : | **Sri. Shivanand Kapashi, I A S**<br>Deputy Commissioner & District Magistrate, Davangere District, Davangere |
| **President** | : | **Sri Mahavir M Karannavara**<br>Honorable Senior Civil Judge and Member Secretary, DLSA Davangere |
| **Theme Speaker** | : | **Dr. H. B. Aravinda**<br>Principal, BIET, Davangere |
| **Chief Guests** | : | **Sri. Suresh B Itnal, I A S**<br>Chief Executive Officer, Zilla Panchayath, Davangere |
| | : | **Dr. Arun Kumar K IPS**<br>Superintendent of Police, Davangere |
| | : | **Sri. L H Arun Kumar**<br>President, District Bar Association, Davangre |
| | : | **Sri. Ramesh D Nayak**<br>Senior Environmental Officer, KSPCB, Zonal Office, Chitradurga |
| | : | **Sri. G R Thippeshappa**<br>Joint Director, School of Education, Davangere |
| | : | **Dr. H Lakshmikantha**<br>Regional Officer, KSPCB, Davangere |
| | : | **Dr. Suresh S**<br>HOD, Dept. Civil Engineering, BIET, Davangere and Honorable Secretory, IEI Davangere Local Centre |
| **Special Invitee** | : | **Prof. Y. Vrushabhendrappa**<br>Director, BIET, Davangere |

***ALL ARE CORDIALLY INVITED***

**DLSA Davangere, District Administration Davangere, KSPCB Davangere,
IEI Davangere Local Centre, Staff and Students of BIET,Davangere**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆ
ಜಿಲ್ಲಾ ಆಡಳಿತ ದಾವಣಗೆರೆ
ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ
ದಿ ಇನ್‌ಸ್ಟಿಟ್ಯೂಶನ್ ಆಫ್ ಇಂಜನಿಯರ್ಸ್ (ಇಂಡಿಯ) ದಾವಣಗೆರೆ ಪ್ರಾದೇಶಿಕ ಕೇಂದ್ರ
ಬಾಪೂಜಿ ಇಂಜನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ
ಇವರ ಸಂಯುಕ್ತಾಶ್ರಯದಲ್ಲಿ

# ವಿಶ್ವ ಪರಿಸರ ದಿನ – ೨೦೧೮

## "ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು"

ಎಂಬ ಘೋಷಣೆಯೊಂದಿಗೆ

**೦೫.೦೬.೨೦೧೮**

ಸಸಿ ನೆಡುವ ಕಾರ್ಯಕ್ರಮ ಸಮಯ ಬೆಳಗ್ಗೆ ೯.೦೦ ರಿಂದ ೯.೩೦ ರವರೆಗೆ

ಪರಿಸರ ಜಾಗೃತಿ ಜಾಥಾ
ಸಮಯ: ಬೆಳಗ್ಗೆ ೩.೩೦ ಕ್ಕೆ
ಸ್ಥಳ: ಗುಂಡಿ ಸರ್ಕಲ್, ದಾವಣಗೆರೆ

ಸಭಾ ಕಾರ್ಯಕ್ರಮಗಳು

| | | |
|---|---|---|
| ದಿನಾಂಕ : ೦೫.೦೬.೨೦೧೮ | ಸ್ಥಳ : ಎಸ್. ಎಸ್. ಎಮ್ ಸಾಂಸ್ಕೃತಿಕ ಕೇಂದ್ರ,<br>ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಆವರಣ | ಸಮಯ ಬೆಳಗ್ಗೆ ೧೦.೦೦ ಗಂಟೆಗೆ |

ಉದ್ಘಾಟನೆ : ಶ್ರೀ. ಶಿವಾನಂದ ಕಾಪಶಿ, ಭಾ ಆ ಸೇ
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ

ಅಧ್ಯಕ್ಷತೆ : ಶ್ರೀ ಮಹಾವೀರ ಮ ಕರಣ್ಣವರ
ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು ಡಿಎಲ್‌ಎಸ್‌ಎ, ದಾವಣಗೆರೆ

ವಿಷಯ ತಜ್ಞ ಭಾಷಣ : ಡಾ. ಹೆಚ್. ಬಿ. ಅರವಿಂದ
ಪ್ರಾಂಶುಪಾಲರು, ಬಿಐಇಟಿ, ದಾವಣಗೆರೆ

ಮುಖ್ಯ ಅತಿಥಿಗಳು : ಶ್ರೀ. ಸುರೇಶ ಬಿ ಇಟ್ನಾಳ್, ಭಾ ಆ ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ

: ಡಾ. ಅರುಣ್ ಕುಮಾರ ಕೆ ಐ ಪಿ ಎಸ್
ಪೋಲೀಸ್ ವರಿಷ್ಠಾಧಿಕಾರಿ, ದಾವಣಗೆರೆ ಜಿಲ್ಲೆ

: ಶ್ರೀ ಎಲ್. ಎಚ್ ಅರುಣ ಕುಮಾರ
ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ, ದಾವಣಗೆರೆ

: ಶ್ರೀ ರಮೇಶ ಡಿ ನಾಯಕ್
ಹಿರಿಯ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ ಚಿತ್ರದುರ್ಗ

: ಶ್ರೀ ಜಿ ಆರ್. ತಿಪ್ಪೇಶಪ್ಪ
ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ

: ಡಾ. ಹೆಚ್ ಲಕ್ಷ್ಮಿಕಾಂತ
ಪ್ರಾದೇಶಿಕ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ

: ಡಾ. ಎಸ್. ಸುರೇಶ
ವಿಭಾಗದ ಮುಖ್ಯಸ್ಥರು, ಸಿವಿಲ್ ಇಂಜಿನಿಯರಿಂಗ್, ಬಿಐಇಟಿ, ದಾವಣಗೆರೆ ಹಾಗೂ
ಗೌರವಾನ್ವಿತ ಕಾರ್ಯದರ್ಶಿ, ಐ.ಇ ಐ ದಾವಣಗೆರೆ ಪ್ರಾದೇಶಿಕ ಕೇಂದ್ರ, ದಾವಣಗೆರೆ

ವಿಶೇಷ ಆಹ್ವಾನಿತರು : ಪ್ರೋ. ವೈ ವೃಷಬೇಂದ್ರಪ್ಪ
ನಿರ್ದೇಶಕರು, ಬಿಐಇಟಿ, ದಾವಣಗೆರೆ

## ಸರ್ವರಿಗೂ ಆದರದ ಸ್ವಾಗತ

ಡಿ ಎಲ್ ಎಸ್ ಎ ದಾವಣಗೆರೆ, ಜಿಲ್ಲಾಡಳಿತ ದಾವಣಗೆರೆ, ಕೆ ಎಸ್ ಪಿ ಸಿಬಿ ದಾವಣಗೆರೆ, ಐ.ಇ ಐ ದಾವಣಗೆರೆ ಪ್ರಾದೇಶಿಕ ಕೇಂದ್ರ,
ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು, ಬಿಐಇಟಿ, ದಾವಣಗೆರೆ,

## ಜಿಲ್ಲೆಯ ವಿವಿಧೆಡೆ ಪರಿಸರ ದಿನಾಚರಣೆ ಕಾರ್ಯಕ್ರಮ; ಸಸಿ ನೆಟ್ಟು ಸಂಭ್ರಮ

prajavani 06-06-2023

# ನೈಸರ್ಗಿಕ ಸಂಪತ್ತು ಉಳಿಸಿ: ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಭೂಮಿ ನಮಗೆ ಮಾತ್ರ ಸೇರಿದ್ದಲ್ಲ, ನಮ್ಮ ಮುಂದಿನ ಪೀಳಿಗೆಗೂ ಸೇರಿದ್ದು. ನೈಸರ್ಗಿಕ ಸಂಪತ್ತನ್ನು ಭವಿಷ್ಯದ ಪೀಳಿಗೆಗೂ ಉಳಿಸುವುದು ಅತ್ಯವಶ್ಯ' ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಶಿಕ್ಷಣ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಾಣಿ, ಪಕ್ಷಿ, ಇತರೆ ಪ್ರಭೇಧದ ಜೀವಿಗಳು ಕಣ್ಮರೆಯಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇರುವುದೊಂದೇ ಭೂಮಿ ಎಲ್ಲರೂ ಗಿಡ ನೆಡುವ ಮೂಲಕ ಪರಿಸರವನ್ನು ಸಂರಕ್ಷಿಸೋಣ' ಎಂದರು.



ದಾವಣಗೆರೆಯ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪರಿಸರ ದಿನಾಚರಣೆ ಕಾರ್ಯಕ್ರಮ ನಡೆಯಿತು

'ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳಬೇಕಿದೆ. ಹಲವಾರು ಕಾನೂನು ನಿಯಮಗಳನ್ನು ಜಾರಿಗೆ ತಂದರೂ, ಜನರು ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಸರಿಯಲ್ಲ' ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ. ಕರಣ್ಣ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಎಚ್. ಲಕ್ಷ್ಮಿಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ, ಪ್ರಾಂಶುಪಾಲ ಎಚ್.ಬಿ.ಅರವಿಂದ, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್.ಸುರೇಶ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ ಹಾಗೂ ವಿವಿಧ ಶಾಲಾ, ಕಾಲೇಜಿಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಮುಖ್ಯಾಂಶಗಳು

- ಪ್ರಾಣಿ, ಪಕ್ಷಿಗಳ ಕಣ್ಮರೆ ಉತ್ತಮ ಬೆಳವಣಿಗೆಯಲ್ಲ
- ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಜಾಗತಿಕ ತಾಪಮಾನ
- ಪ್ಲಾಸ್ಟಿಕ್ ಬಳಕೆ ಸರಿಯಲ್ಲ

# ಪರಿಸರ ನಾಶ ನಿಂತ ಟೊಂಗೆಗೆ ಕೊಡಲಿಯಂತೆ

Janathavani 06-06-2023

## ಬಿ.ಐ.ಇ.ಟಿ.ಯಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಕಾಪಶಿ

ದಾವಣಗೆರೆ, ಜೂ. 5 - ಮಾಲಿನ್ಯದಿಂದ ಭೂಮಿಯನ್ನು ನಾಶ ಮಾಡುವುದು ಎಂದರೆ, ನಾವು ನಿಂತ ಟೊಂಗೆಗೆ ಕೊಡಲಿ ಹಾಕಿದಂತೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಎಚ್ಚರಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಿಕ್ಷಣ ಇಲಾಖೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ಗಳ ಸಂಯುಕ್ತಾಶ್ರಯದಲ್ಲಿ ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ಮಾಲಿನ್ಯದಿಂದ ಜೀವವೈವಿಧ್ಯಗಳು ನಾಶವಾಗುತ್ತಿವೆ. ಇದೊಂದು ರೀತಿ ಸಂಪತ್ತಿನ ನಷ್ಟದಂತೆ. ಬೇರೆ ಸಂತತಿ ಇಲ್ಲದಿದ್ದರೆ ಮಾನವರಿಗೂ ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ ಎಂದು ಹೇಳಿದರು.

ಪರಿಸರ ರಕ್ಷಣೆಗಾಗಿ ವಸ್ತುಗಳ ಬಳಕೆ ಕಡಿಮೆ ಮಾಡಬೇಕು. ಮರುಬಳಕೆಗೆ ಉತ್ತೇಜನ ನೀಡಬೇಕು. ಆಗ ಮಾತ್ರ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಉಳಿಸಲು ಸಾಧ್ಯ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಹಿರಿಯ ಸಿವಿಲ್ ನ್ಯಾಯಮೂರ್ತಿ ಮಹಾವೀರ ಎಂ. ಕರಣ್ಣ ಮಾತನಾಡಿ, ಪ್ಲಾಸ್ಟಿಕ್ ನಿಯಂತ್ರಣಕ್ಕಾಗಿ ಆದೇಶ ಹೊರಡಿಸಿದರೂ ಸಹ ಅದರ ಬಳಕೆ ಹೆಚ್ಚಾಗುತ್ತಿದೆ.



ಸರ್ಕಾರದ ಜೊತೆ ಜನರೂ ಕೈ ಜೋಡಿಸಿ ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಬೇಕು ಎಂದರು.

ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ ಮಾತನಾಡಿ, ಪರಿಸರ ಜಾಗೃತಿಗಾಗಿ 600 ವಿದ್ಯಾರ್ಥಿಗಳು ಇಂದು ಜಾಥಾ ನಡೆಸಿದ್ದಾರೆ. ಇದರ ಜೊತೆಗೆ ವಿದ್ಯಾರ್ಥಿಗಳು ಪರಿಸರ ರಕ್ಷಣೆಗೆ ದೃಢ ನಿರ್ಧಾರ ತಳೆಯಬೇಕಿದೆ. ಪರಿಸರ ರಕ್ಷಣೆಗೆ ಅಳಿಲು ಸೇವೆ ಸಲ್ಲಿಸುವುದೇ ಸಮಾಜ ಸೇವೆ ಎಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಹೆಚ್. ಲಕ್ಷ್ಮಿಕಾಂತ್ ಮಾತನಾಡಿ, ಭೂಮಿಯ ಮೇಲ್ಮೈ ಮಣ್ಣು ಅತ್ಯಮೂಲ್ಯ. ಆದರೆ, ಈ ಮಣ್ಣನ್ನು ಹೆದ್ದಾರಿ, ವಿಮಾನ ನಿಲ್ದಾಣ, ರೈಲ್ವೆ, ಇಟ್ಟಿಗೆ ಮತ್ತಿತರೆ ಉದ್ದೇಶಗಳಿಗೆ ಪೋಲು (5ನೇ ಪುಟಕ್ಕೆ)

# ನಿಂತ ಟೊಂಗೆಗೆ ಕೊಡಲಿಯಂತೆ

(1ನೇ ಪುಟದಿಂದ) ಮಾಡಲಾಗುತ್ತಿದೆ. ಇದನ್ನು ತಪ್ಪಿಸಲು ಕ್ರಮದ ಅಗತ್ಯವಿದೆ ಎಂದರು.

ಜಿಲ್ಲಾ ವಕೀಲರ ಒಕ್ಕೂಟದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಪ್ರತಿ ವರ್ಷ ವಿಶ್ವದಲ್ಲಿ 43 ಕೋಟಿ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಶೇ.46ರಷ್ಟು ಭೂಮಿ ಸೇರುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ ನಿವಾರಣೆಗೆ ಆದ್ಯತೆ ನೀಡಬೇಕಿದೆ ಎಂದರು.

ಬಿ.ಐ.ಇ.ಟಿ. ಪ್ರಾಂಶುಪಾಲ ಹೆಚ್.ಬಿ. ಅರವಿಂದ ಅವರು ಪ್ಲಾಸ್ಟಿಕ್ ಮಾಲಿನ್ಯ ಪರಿಹಾರದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬಿಐಇಟಿ ನಿರ್ದೇಶಕ ಡಾ. ವೈ. ವೃಷಭೇಂದ್ರಪ್ಪ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಸ್ ಸುರೇಶ ಮತ್ತಿತರರು ಉಪಸ್ಥಿತರಿದ್ದರು. ಕೆ.ಸಿ. ಶಿಲ್ಪ ನಿರೂಪಿಸಿದರೆ, ಶಿಲ್ಪ ಹಿರೇಮಠ ಪ್ರಾರ್ಥಿಸಿದರು. ಬಿ.ವಿ. ರಮ್ಯ ಸ್ವಾಗತಿಸಿದರು.

### ನೈಸರ್ಗಿಕ ಸಂಪನ್ಮೂಲ ಬಳಕೆಗೆ ಪ್ರತಿಯೊಬ್ಬರೂ ಒತ್ತು ನೀಡುವುದು ಅಗತ್ಯ

# ಮಾನವನ ಸ್ವಾರ್ಥದಿಂದ ಪರಿಸರ ನಾಶ: ಕಾಪಶಿ

Udayavani 06-06-2023

ದಾವಣಗೆರೆ: ಭೂಮಿ ತಮಗಲ್ಲದೆ ಮುಂದಿನ ಪೀಳಿಗೆಗೂ ಅತ್ಯವಶ್ಯಕ. ಭೂಮಿ ಮೇಲೆ ಬದುಕಲು ಎಲ್ಲ ಜೀವಿಗಳಿಗೂ ಹಕ್ಕಿದೆ. ಹಾಗಾಗಿ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮನವಿ ಮಾಡಿದರು.

ಸೋಮವಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಜ್ಯ ಮಾಲಿನ್ಯ ಮಂಡಳಿ, ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಪ್ರಾದೇಶಿಕ ಕೇಂದ್ರ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ಸ್ವಾರ್ಥದಿಂದ ಪರಿಸರ ನಾಶವಾಗುತ್ತಿದೆ. ಭೂಮಿಯಲ್ಲಿ ಜೀವ ವೈವಿಧ್ಯತೆ ದಿನದಿಂದ ದಿನಕ್ಕೆ ತೀರಾ ಕಡಿಮೆಯಾಗುತ್ತಿದ್ದು, ಮಾನವ ಸಂತತಿ ಹೆಚ್ಚುತ್ತಿದೆ. ಮಾನವ ನಿರ್ಮಿತ ವಸ್ತುಗಳನ್ನು ಬಳಸದೆ ನೈಸರ್ಗಿಕವಾಗಿ ಸಿಗುವಂತಹ ಸಂಪನ್ಮೂಲಗಳನ್ನು ಬಳಸಿ ಎಂದರು.

ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರಣ್ಣನವರ ಮಾತನಾಡಿ, ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಹಾಗಾಗಿ ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ. ಪ್ಲಾಸ್ಟಿಕ್ ಬಳಸುವುದಕ್ಕೆ ಹಲವಾರು ಕಾನೂನು ನಿಯಮಗಳನ್ನು ಜಾರಿಗೆ ತಂದರೂ ಜನರು ಕಿವಿಗೊಡದೆ ದಿನೇ ದಿನೇ ಪ್ಲಾಸ್ಟಿಕ್ ಬಳಕೆ ಹೆಚ್ಚು ಮಾಡುತ್ತಿದ್ದಾರೆ. ಅದನ್ನು ಸೀಮಿತವಾಗಿ ಬಳಸಬೇಕು. ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಲುವಾಗಿ ಜಾಥಾ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಂದು ಶಾಲಾ-ಕಾಲೇಜುಗಳಲ್ಲಿ ಗಿಡ ನೆಡುವ ಕಾರ್ಯ ಕೈಗೊಳ್ಳಬೇಕು. ವಿದ್ಯಾರ್ಥಿ ದೆಸೆಯಿಂದಲೇ ಪರಿಸರ ಸಂರಕ್ಷಣೆ ಆಗಬೇಕಿದೆ. ಪರಿಸರದ ಸಂಪನ್ಮೂಲಗಳನ್ನು ಬಳಸಿ, ಆದರೆ ಅಳಿಸಬೇಡಿ ಎಂದು ಹೇಳಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಡಾ| ಎಚ್. ಲಕ್ಷ್ಮೀಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಡಾ| ಎಚ್. ಬಿ.ಅರವಿಂದ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ| ಎಸ್. ಸುರೇಶ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್, ಮಹಾನಗರಪಾಲಿಕೆ ಆಯುಕ್ತೆ ಜಿ. ರೇಣುಕಾ ಹಾಗೂ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ದಾವಣಗೆರೆ: ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದರು.

> ಎರಡನೇ ಮಹಾಯುದ್ಧದ ನಂತರ ಪ್ರಾಣಿ, ಪಕ್ಷಿ, ಸೂಕ್ಷ್ಮಾಣು ಜೀವಿಗಳು ಕಣ್ಮರೆಯಾಗಿ ಮನುಷ್ಯ ತನ್ನತನವನ್ನೇ ಮರೆಯುತ್ತಿದ್ದಾನೆ. ಇರುವುದೊಂದೇ ಭೂಮಿಯಾಗಿದ್ದು, ಎಲ್ಲರೂ ಗಿಡ ನೆಡುವುದರ ಮೂಲಕ ನಮ್ಮ ಪರಿಸರವನ್ನು ನಾವೇ ಸಂರಕ್ಷಿಸಿಕೊಳ್ಳಬೇಕಿದೆ.
>
> ● **ಶಿವಾನಂದ ಕಾಪಶಿ,** ಜಿಲ್ಲಾಧಿಕಾರಿ

## ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅಭಿಮತ | ದಾವಣಗೆರೆ ಜಿಲ್ಲಾಡಳಿತದಿಂದ ವಿಶ್ವ ಪರಿಸರ ದಿನ

vijayavani 06-06-2023

# ಮನುಷ್ಯನ ಸ್ವಾರ್ಥದಿಂದ ಪರಿಸರ ವಿನಾಶ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಮನುಷ್ಯನ ಸ್ವಾರ್ಥದಿಂದ ಪರಿಸರ ನಾಶವಾಗುತ್ತಿದ್ದು, ಭೂಮಿಯಲ್ಲಿ ಜೀವ ವೈವಿಧ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಮಾನವನ ದುರಾಸೆಯೇ ಇದಕ್ಕೆ ಕಾರಣ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾಲಯದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಲಿನ್ಯ ಮಂಡಳಿ, ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಪ್ರಾದೇಶಿಕ ಕೇಂದ್ರ ಸೋಮವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭೂಮಿ ತಮಗಲ್ಲದೆ ಮುಂದಿನ ಪೀಳಿಗೆಗೂ ಅತ್ಯವಶ್ಯಕ. ಭೂಮಿ ಮೇಲೆ ಬದುಕಲು ಸಕಲ ಜೀವಿಗಳಿಗೂ ಹಕ್ಕಿದೆ. ಮಾನವ ನಿರ್ಮಿತ ವಸ್ತುಗಳನ್ನು ಬಳಸದೇ ನೈಸರ್ಗಿಕವಾಗಿ ಸಿಗುವಂತಹ ಸಂಪನ್ಮೂಲಗಳನ್ನು ಬಳಸಬೇಕು. ಗಿಡ ನೆಡುವುದರ ಮೂಲಕ ಪರಿಸರವನ್ನು ನಾವೇ ಸಂರಕ್ಷಿಸೋಣ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮಕರಣ್ಣವರ ಮಾತನಾಡಿ, ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದ್ದು, ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ. ಪ್ಲಾಸ್ಟಿಕ್ ಕಾನೂನು ನಿಯಮಗಳನ್ನು ಜಾರಿಗೊಳಿಸಿದರೂ ಬಳಕೆ ನಿಂತಿಲ್ಲ. ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಲುವಾಗಿ ಈ ದಿನ 2.5 ಕಿ.ಮೀ ಜಾಥಾ ಹಮ್ಮಿಕೊಂಡಿದ್ದು, ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಗಿಡ ನೆಡುವ ಕಾರ್ಯ ಕೈಗೊಳ್ಳಬೇಕು ಎಂದು ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಅಧಿಕಾರಿ ಎಚ್. ಲಕ್ಷ್ಮಿಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಎಚ್.ಬಿ.ಅರವಿಂದ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್. ಸುರೇಶ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್ ಇತರರಿದ್ದರು.



ದಾವಣಗೆರೆಯ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾಲಯದಲ್ಲಿ ಜಿಲ್ಲಾಡಳಿತ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಉದ್ಘಾಟಿಸಿದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಅಧಿಕಾರಿ ಎಚ್. ಲಕ್ಷ್ಮಿಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಎಚ್.ಬಿ.ಅರವಿಂದ, ಡಾ.ಎಸ್.ಸುರೇಶ, ಎಲ್.ಎಚ್.ಅರುಣ್ ಕುಮಾರ್ ಇದ್ದರು.



ದಾವಣಗೆರೆಯ ತುಂಗಭದ್ರಾ ಬಡಾವಣೆಯಲ್ಲಿ ಸೋಮವಾರ ವಿಶ್ವ ಪರಿಸರ ದಿನದ ಅಂಗವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಹೆಗಡೆ ಸಸಿ ನೆಟ್ಟು ನೀರು ಹಾಕಿದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮಕರಣ್ಣವರ್, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜೆ.ವಿ.ವಿಜಯಾನಂದ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ದಶರಥ ಇತರರಿದ್ದರು.

## ಅರಣ್ಯ ಬೆಳೆಸಿ ಜೀವ ಸಂಕುಲ ರಕ್ಷಿಸಿ

ದಾವಣಗೆರೆ: ಪರಿಸರ ಉಳಿಸಿ ಸಕಲ ಜೀವ ಸಂಕುಲಗಳನ್ನು ರಕ್ಷಿಸುವ ಜವಾಬ್ದಾರಿ ಯುವ ಪೀಳಿಗೆಯ ಮೇಲಿದೆ ಎಂದು ಎ.ವಿ.ಕಮಲಮ್ಮ ಮಹಿಳಾ ಪಿಯು ಕಾಲೇಜಿನ ಪ್ರಾಚಾರ್ಯ ರವಿ ಬಣಕಾರ ಹೇಳಿದರು. ನಗರದ ಎ.ವಿ.ಕೆ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಗಿಡ ನೆಟ್ಟು ವಿಶ್ವ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು.

ನಮಗೆ ಪ್ರಕೃತಿಯೇ ದೇವರಾಗಿದ್ದು ಮೂಲಭೂತ ಅವಶ್ಯಕತೆಗಳನ್ನು ನೀಡಿದೆ. ಉತ್ತಮ ಆರೋಗ್ಯ ಸಿಗಬೇಕಾದರೆ ಮಾಲಿನ್ಯ ಮುಕ್ತ ಪರಿಸರ ಬೇಕು ಎಂದು ತಿಳಿಸಿದರು. ಪದವಿ ಕಾಲೇಜಿನ ಪ್ರಾಚಾರ್ಯೆ ಕಮಲಾ ಸೊಪ್ಪಿನ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಎಂ.ಸಿ.ಗೀತಾ, ಉಪನ್ಯಾಸಕಿ ಅಶ್ವಿನಿ, ಮಂಜುಳಾ ಇತರರಿದ್ದರು.



ದಾವಣಗೆರೆ ಎವಿ ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪದವಿ ಕಾಲೇಜಿನ ಪ್ರಾಚಾರ್ಯೆ ಕಮಲಾ ಸೊಪ್ಪಿನ್ ವಿದ್ಯಾರ್ಥಿನಿಯರಿಗೆ ಗಿಡಗಳನ್ನು ನೀಡಿದರು. ಪ್ರಾಚಾರ್ಯ ರವಿ ಬಣಕಾರ, ಡಾ.ಎಂ.ಸಿ.ಗೀತಾ, ಅಶ್ವಿನಿ, ಮಂಜುಳಾ ಇದ್ದರು.

## ನ್ಯಾಮತಿಯಲ್ಲಿ ವನಮಹೋತ್ಸವ

ನ್ಯಾಮತಿ: ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಸೋಮವಾರ ವನಮಹೋತ್ಸವ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಪಬ್ಲಿಕ್ ಶಾಲೆ ಮತ್ತು ಬಾಲಕಿಯರ ಪಿಯು ಕಾಲೇಜಿನಲ್ಲಿ ಸೃಷ್ಟಿ ಪರಿಸರ ಸಂಘದ ಅಧ್ಯಕ್ಷ ಆರುಂಡಿ ಹಂಪಣ್ಣ ಸಸಿ ನೆಟ್ಟರು. ಪ್ರಾಂಶುಪಾಲ ವಿ.ಪಿ.ಪೂರ್ಣಾನಂದ, ನವ್ವಲೆ ಗಂಗಾಧರ್, ತಾಪಂ ಮಾಜಿ ಸದಸ್ಯ ಸಿದ್ದಲಿಂಗಪ್ಪ, ಪ.ಪಂ. ಮುಖ್ಯಾಧಿಕಾರಿ ಪಿ.ಗಣೇಶ್‌ರಾವ್, ಸಿಬ್ಬಂದಿ ಮಂಜುಳಮ್ಮ, ನಾಗರಾಜಪ್ಪ ಇತರರಿದ್ದರು.



ನ್ಯಾಮತಿಯ ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ ಸೃಷ್ಟಿ ಪರಿಸರ ಸಂಘದ ಅಧ್ಯಕ್ಷ ಆರುಂಡಿ ಹಂಪಣ್ಣ ಸಸಿ ನೆಟ್ಟರು. ಪಿ.ಗಣೇಶ್‌ರಾವ್, ಸಿದ್ದಲಿಂಗಪ್ಪ, ವಿ.ಪಿ.ಪೂರ್ಣಾನಂದ ಇತರರಿದ್ದರು.

# ಮಕ್ಕಳಿಂದಲೇ ಹೆಚ್ಚು ಪ್ಲಾಸ್ಟಿಕ್ ಮಾಲಿನ್ಯ!

vijayakarnataka 6-6-2023

## ವಿಶ್ವ ಪರಿಸರ ದಿನಾಚರಣೆ | ಶೇ.18ರಷ್ಟು ಚಿಪ್ಸ್-ಕುರ್ಕುರೆ ಪ್ಯಾಕೆಟ್‌ಗಳ ಬಳಕೆ



ದಾವಣಗೆರೆಯ ಬಿಐಇಡಿ ಕಾಲೇಜಿನಲ್ಲಿ ಸೋಮವಾರ ಜಿಲ್ಲಾಡಳಿತ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಗಿಡಕ್ಕೆ ನೀರೆರೆದು ಉದ್ಘಾಟಿಸಿದರು. ನ್ಯಾ. ಮಹಾವೀರ ಮ ಕರಣ್ಣವರ್, ಎಲ್.ಎಚ್. ಅರುಣ್ ಕುಮಾರ್, ಡಾ.ಎಚ್.ಬಿ. ಅರವಿಂದ ಇತರರಿದ್ದರು.

**ವಿಕ ಸುದ್ದಿಲೋಕ** ದಾವಣಗೆರೆ

''ಭಾರತದಲ್ಲಿ ಆಗುತ್ತಿರುವ ಒಟ್ಟಾರೆ ಪ್ಲಾಸ್ಟಿಕ್ ಮಾಲಿನ್ಯಕ್ಕೆ ಮಕ್ಕಳು ನೀಡುತ್ತಿರುವ ಕೊಡುಗೆಯೇ ಅತಿ ಹೆಚ್ಚು'' ಎಂದು ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಹೇಳಿದರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ (ಬಿಐಇಟಿ) ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮದಲ್ಲಿ ವಿಷಯ ತಜ್ಞರಾಗಿ ಪಾಲ್ಗೊಂಡು ಮಾತನಾಡಿದರು.

''ಪರಿಸರದಲ್ಲಿರುವ ಒಟ್ಟು ಹಾನಿಕಾರಕ ಪ್ಲಾಸ್ಟಿಕ್‌ನಲ್ಲಿ ಶೇ.18ರಷ್ಟು ಚಿಪ್ಸ್ ಮತ್ತು ಕುರ್ಕುರೆ ಪ್ಯಾಕೆಟ್‌ಗಳೇ ಇವೆ. ಮಕ್ಕಳು ಚಿಪ್ಸ್ ಮತ್ತು ಕುರ್ಕುರೆ ರೀತಿಯ ಕುರುಕಲು ತಿಂಡಿಗಳನ್ನು ಅಂಗಡಿಯಿಂದ ಖರೀದಿಸಿ ಸೇವಿಸಿದ ಬಳಿಕ ಪ್ಲಾಸ್ಟಿಕ್ ಪೊಟ್ಟಣಗಳನ್ನು ಬಿಸಾಡುತ್ತಾರೆ. ಹೀಗೆ ಬಿಸಾಡಿದಂತಹ ಖಾಲಿ ಕವರ್‌ಗಳು ಇಂದು ಪರಿಸರದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟು ಮಾಡುತ್ತಿವೆ. ಈ ಕವರ್‌ಗಳು ಮಾತ್ರವಲ್ಲದೆ, ಪ್ಲಾಸ್ಟಿಕ್ ಕಪ್, ಪಾನೀಯ ಸೇವಿಸಲು ಬಳಸುವ ಸ್ಟ್ರಾ, ಪೆಟ್ ಬಾಟಲಿಗಳು ಸೇರಿ ಎಲ್ಲ ರೀತಿಯ ಪ್ಲಾಸ್ಟಿಕ್ ವಸ್ತುಗಳು ಪರಿಸರವನ್ನು ಮಲಿನಗೊಳಿಸುತ್ತಿವೆ,'' ಎಂದು ವಿಷಾದಿಸಿದರು.

**ಬಾಟಲಿ ಕರಗಲು ಸಾವಿರ ವರ್ಷ:** ''ನಾವೆಲ್ಲರೂ ಬಾಯಾರಿಕೆ ಆದಾಗ ಅಂಗಡಿಯಲ್ಲಿ ಒಂದು ಪ್ಲಾಸ್ಟಿಕ್ ಪೆಟ್ ಬಾಟಲಿಯಲ್ಲಿರುವ ನೀರು ಖರೀದಿಸುತ್ತೇವೆ. ನೀರು ಕುಡಿದ ಬಳಿಕ ಆ ಬಾಟಲಿಯನ್ನು ಬಿಸಾಡುತ್ತೇವೆ. ಆದರೆ, ಈ ಬಾಟಲಿಯನ್ನು ಎಲ್ಲೆಂದರಲ್ಲಿ ಬಿಸಾಡದೆ ಅದನ್ನು ಮರು ಬಳಕೆ ಮಾಡಬೇಕು. ಏಕೆಂದರೆ ಇಂತಹ ಪ್ಲಾಸ್ಟಿಕ್, ಮಣ್ಣಲ್ಲಿ ಸೇರಿಕೊಂಡರೆ ಅದು ಕರಗಲು ಒಂದು ಸಾವಿರ ವರ್ಷಗಳು ಬೇಕು. ಅಷ್ಟರಲ್ಲಿ ಅದು ನಮ್ಮ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಪ್ಲಾಸ್ಟಿಕ್‌ನಲ್ಲಿರುವ ಪಾಲಿಥಿಲಿನ್ ಅಂಶವು ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆ'' ಎಂದು ಹೇಳಿದರು.

### ಮಕ್ಕಳೇ ಪ್ಲಾಸ್ಟಿಕ್ ನಿರಾಕರಿಸಿ

''ಪ್ಲಾಸ್ಟಿಕ್ ಬಳಕೆ ನಿಲ್ಲಿಸುವ ಕಾರ್ಯ ಮಕ್ಕಳಿಂದಲೇ ಆಗಬೇಕು. ಮುಖ್ಯವಾಗಿ ಚಿಪ್ಸ್ ಮತ್ತು ಕುರ್ಕುರೆ ರೀತಿಯ ಕುರುಕಲು ತಿಂಡಿಗಳು ಪ್ಲಾಸ್ಟಿಕ್ ಕವರ್‌ನಲ್ಲಿ ಪ್ಯಾಕ್ ಆಗಿದ್ದರೆ ಖರೀದಿಸುವುದಿಲ್ಲ ಎಂದು ಮಕ್ಕಳು ದೃಢ ನಿರ್ಧಾರ ಮಾಡಬೇಕು. ಆಗ ಕಂಪನಿಯವರು ಪ್ಲಾಸ್ಟಿಕ್ ಕವರ್ ಬಿಟ್ಟು ಪೇಪರ್ ಕವರ್‌ಗಳನ್ನು ಬಳಸುತ್ತಾರೆ. ಹಾಗೇ ಅಂಗಡಿಗೆ ಹೋಗುವಾಗ ಮನೆಯಿಂದ ಬಟ್ಟೆಯ ಚೀಲ ತೆಗೆದುಕೊಂಡು ಹೋಗಬೇಕು. ಅಗಡಿಯವರು ಪ್ಲಾಸ್ಟಿಕ್ ಕವರ್ ನೀಡಲು ಬಂದರೆ ನಿರಾಕರಿಸಬೇಕು'' ಎಂದು ಡಾ. ಅರವಿಂದ್ ಸಲಹೆ ನೀಡಿದರು.

### ವಿಲೇವಾರಿ ಸರಿಯಾಗಿರಲಿ

''ಬಾಟಲಿ ಸೇರಿ ಯಾವುದೇ ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಿದ ಬಳಿಕ ಅತ್ಯಂತ ಸುರಕ್ಷಿತವಾಗಿ ಮತ್ತು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ ಪ್ಲಾಸ್ಟಿಕ್‌ನಲ್ಲಿರುವ ಹಾನಿಕಾರದ ವಿಷಗಳು ನೀರು ಮತ್ತು ಮಣ್ಣಿನಲ್ಲಿ ಬೆರೆಯುವ ಸಾಧ್ಯತೆ ಹೆಚ್ಚಿರುತ್ತದೆ. ಈ ವಿಷಕಾರಿ ಅಂಶಗಳು ಆಹಾರದೊಂದಿಗೆ ಬೆರೆತು ನಮ್ಮ ದೇಹ ಸೇರಿದರೆ ಕ್ಯಾನ್ಸರ್ ರೀತಿಯ ಮಾರಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ'' ಎಂದು ಡಾ. ಅರವಿಂದ್ ಎಚ್ಚರಿಸಿದರು.

ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಚಾಲನೆ ನೀಡಿದರು. ಹಿರಿಯ ಸಿವಿಲ್ ನ್ಯಾಯಧೀಶರಾದ ಮಹಾವೀರ ಮ ಕರಣ್ಣವರ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್, ಮಾಲಿನ್ಯ ನಿಯಂತ್ರಣ ಮಂಡಳಿ ಹಿರಿಯ ಪರಿಸರ ಅಧಿಕಾರಿ ರಮೇಶ ಡಿ. ನಾಯಕ್, ಪ್ರಾದೇಶಿಕ ಅಧಿಕಾರಿ ಡಾ.ಎಚ್. ಲಕ್ಷ್ಮೀಕಾಂತ್, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಬಿಐಇಟಿ ನಿರ್ದೇಶಕ ಪ್ರೊ. ವೃಷಭೇಂದ್ರಪ್ಪ, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್. ಸುರೇಶ ಇತರರಿದ್ದರು.

kannadaprabha 06-06-2023

# ಮನುಷ್ಯನ ಸ್ವಾರ್ಥದಿಂದ ಪರಿಸರ ನಾಶ: ಕಾಪಶಿ

## ಜಿಲ್ಲಾಡಳಿತ ಸೇರಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಡೆದ ವಿಶ್ವ ಪರಿಸರ ದಿನದಲ್ಲಿ ಜಿಲ್ಲಾಧಿಕಾರಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಭೂಮಿ ತಮಗಲ್ಲದೆ ಮುಂದಿನ ಪೀಳಿಗೆಗೂ ಅತ್ಯವಶ್ಯಕ, ಭೂಮಿ ಮೇಲೆ ಬದುಕಲು ಎಲ್ಲಾ ಜೀವಿಗಳಿಗೂ ಹಕ್ಕಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ಸೋಮವಾರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಜ್ಯ ಮಾಲಿನ್ಯ ಮಂಡಳಿ, ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಪ್ರಾದೇಶಿಕ ಕೇಂದ್ರ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಸಹಯೋಗದೊಂದಿಗೆ ಜರುಗಿದ ವಿಶ್ವ ಪರಿಸರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು ಎಂಬ ಘೋಷಣೆಯೊಂದಿಗೆ, ಮನುಷ್ಯನ ಸ್ವಾರ್ಥದಿಂದ ಪರಿಸರ ನಾಶವಾಗುತ್ತಿದೆ, ಭೂಮಿಯಲ್ಲಿ ಜೀವ ವೈವಿಧ್ಯತೆ ದಿನದಿಂದ ದಿನಕ್ಕೆ ತೀರಾ ಕಡಿಮೆಯಾಗುತ್ತಿದ್ದು, ಮಾನವ ಸಂತತಿ ಹೆಚ್ಚುತ್ತಿದೆ ಎಂದರು.

**ನೈಸರ್ಗಿಕ ಸಂಪತ್ತು ಉಳಿಸಿ:** ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಡಿಎಲ್‌ಎಸ್‌ಎ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರಣ್ಣನವರು ಮಾತನಾಡಿ ವರ್ಷದಿಂದ ವರ್ಷಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದ್ದು, ನೈಸರ್ಗಿಕ ಸಂಪತ್ತು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಿದೆ. ಪ್ಲಾಸ್ಟಿಕ್ ಅನ್ನು ಬಳಸುವುದಕ್ಕೆ ಹಲವಾರು ಕಾನೂನು ನಿಯಮಗಳನ್ನು ಜಾರಿಗೆ ತಂದರೂ ಜನರು ಕಿವಿಗೊಡದೆ ದಿನೇ ದಿನೇ ಪ್ಲಾಸ್ಟಿಕ್ ಬಳಕೆ ಹೆಚ್ಚು ಮಾಡುತ್ತಿದ್ದಾರೆ. ಯಾವುದಕ್ಕೆ ಪ್ಲಾಸ್ಟಿಕ್ ಅಗತ್ಯತೆ ಎನಿಸುತ್ತದೆ, ಅದಕ್ಕೆ ಸೀಮಿತವಾಗಿ ಬಳಸಬೇಕು. ಪ್ಲಾಸ್ಟಿಕ್ ಮುಕ್ತ ಸಮಾಜವನ್ನು ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಆರ್.ತಿಪ್ಪೇಶಪ್ಪ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಲುವಾಗಿ ಈ ದಿನ 2.5 ಕಿ.ಮೀ ಜಾಥಾ ಕೈಗೊಳ್ಳಲಾಗಿದ್ದು, ಪ್ರತಿ ಶಾಲಾ ಕಾಲೇಜುಗಳಲ್ಲಿ ಗಿಡ ನೆಡುವ ಕಾರ್ಯ ಕೈಗೊಳ್ಳಿ. ವಿದ್ಯಾರ್ಥಿಗಳ ದಸ ಯಿಂದಲೂ ಪರಿಸರ ಸಂರಕ್ಷಣೆ ಆಗಬೇಕಿದೆ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಪರಿಸರ ಸಂಪನ್ಮೂಲಗಳ ಬಳಸಿ ಅಳಿಸಬೇಡಿ ಎಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಎಚ್.ಲಕ್ಷ್ಮೀಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್.ಸುರೇಶ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣಕುಮಾರ ಹಾಗೂ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿದ್ದರು.



ದಾವಣಗೆರೆಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಡಿಸಿ ಶಿವಾನಂದ ಕಾಪಶಿ ಉದ್ಘಾಟಿಸಿದರು.

> ಮಾನವ ನಿರ್ಮಿತ ವಸ್ತುಗಳ ಬಳಸದೇ ನೈಸರ್ಗಿಕವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿ ಎಂದ ಅವರು, ಎರಡನೇ ಮಹಾಯುದ್ಧದ ನಂತರ ಪ್ರಾಣಿ, ಪಕ್ಷಿ, ಸೂಕ್ಷ್ಮಾಣು ಜೀವಿಗಳು ಕಣ್ಮರೆಯಾಗಿ, ಮನುಷ್ಯ ತನ್ನತನ ಮೆರೆಯುತ್ತಿದ್ದಾನೆ, ಇರುವುದೊಂದೇ ಭೂಮಿ ಎಲ್ಲರು ಗಿಡ ನೆಡುವ ಮೂಲಕ ನಮ್ಮ ಪರಿಸರವನ್ನು ನಾವೇ ಸಂರಕ್ಷಿಸೋಣ.
>
> • **ಶಿವಾನಂದ ಕಾಪಶಿ** ಜಿಲ್ಲಾಧಿಕಾರಿ

# ಅಧಿಕ ತಾಪದಿಂದ ಜೀವಸಂಕುಲಕ್ಕೆ ಗಂಡಾಂತರ

## ವಿಶ್ವ ಪರಿಸರ ದಿನಾಚರಣೆಯಲ್ಲಿ ತೋಟಗಾರಿಕಾ ಇಲಾಖೆ ಅಧಿಕಾರಿ ರೇಷ್ಮಾ ಅಭಿಮತ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಭೂಮಿಯಲ್ಲಿನ 5-10 ಮಿಲಿಯನ್ ಜೀವರಾಶಿಗಳಲ್ಲಿ ಸರಿ ಸುಮಾರು 17,300 ಜೀವರಾಶಿಗಳು ಅಳಿವಿನ ಅಂಚಿನಲ್ಲಿವೆ. ಈ ಎಲ್ಲಾ ಜೀವಿಗಳ ಉಳಿವಿಗಾಗಿ ಭೂಮಿಯ ರಕ್ಷಿಸಬೇಕಿದೆ. ನಾವು ತುರ್ತಾಗಿ ಪರಿಸರ ಉಳಿವಿಗಾಗಿ ಶ್ರಮಿಸದಿದ್ದರೆ ಜೀವರಾಶಿಗಳಿಗೆ ಉಳಿಗಾಲವಿಲ್ಲ ಎಂದು ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕಿ ರೇಷ್ಮಾ ಪರ್ವೀನ್ ತಿಳಿಸಿದರು.

ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಸಮಿತಿ, ಜೀಜಾಮಾತಾ ಮಹಿಳಾ ಮಂಡಳಿ ಸಹಯೋಗದಲ್ಲಿ ಜೀಜಾಮಾತಾ ಹಿರಿಯ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವರ್ಷದಿಂದ ವರ್ಷಕ್ಕೆ ತಾಪಮಾನ ಅಧಿಕವಾಗುವುದರಿಂದ ಮಾನವನು ಸೇರಿ ಎಲ್ಲ ಜೀವಸಂಕುಲದ ಅಸ್ತಿತ್ವಕ್ಕೆ ಗಂಡಾಂತರ ಬಂದೊದಗಿದೆ. ಈ ವರ್ಷದ ಬೇಸಿಗೆ ದಿನಗಳಲ್ಲಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ದಾಖಲಾಗಿರುವ ತಾಪಮಾನ ನೋಡಿದರೆ ಭಯವಾಗುತ್ತದೆ ಎಂದು ತಿಳಿಸಿದರು.

ಕುಂದುವಾಡ ಸರ್ಕಾರಿ ಪ.ಪೂ. ಕಾಲೇಜಿನ ಉಪನ್ಯಾಸಕ ಅಂಗಡಿ ಸಂಗಪ್ಪ ಮಾತನಾಡಿ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮ, ಏರುತ್ತಿರುವ ಉಷ್ಣಾಂಶದಿಂದಾಗಿ ಹಿಮ ಪರ್ವತಗಳು ಕರಗಿ ಸಮುದ್ರದ ಮಟ್ಟ ಅಧಿಕವಾಗಲಿದೆ. ಅದರ ಪರಿಣಾಮ ವಿಶ್ವದ ಹತ್ತು ರಾಷ್ಟ್ರಗಳಿಗೆ ಗಂಡಾಂತರವಿದೆ. ಭಾರತದ ಕರಾವಳಿಗೆ ಹೊಂದಿರುವ 4 ಕೋಟಿಗೂ ಅಧಿಕ ಜನರಿಗೆ ಅಪಾಯ ಒದಗಲಿದೆ. ಸಮರೋಪಾದಿಯಲ್ಲಿ ಪರಿಸರ ಸಮತೋಲನ ಎಲ್ಲರು ಸೇರಿ ಕಾಪಾಡಬೇಕಿದೆ ಎಂದು ತಿಳಿಸಿದರು.

ರಾಜ್ಯ ವಿಜ್ಞಾನ ಪರಿಷತ್ತಿನ ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಎಂ.ಗುರುಸಿದ್ದಸ್ವಾಮಿ ಮಾತನಾಡಿ, ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ನಗರೀಕರಣ, ಕೈಗಾರಿಕಾ ಬೆಳವಣಿಗೆ, ಸಾಮಾಜಿಕ, ಆರ್ಥಿಕ ರಂಗದಲ್ಲಾಗುತ್ತಿರುವ ಬದಲಾವಣೆಗಳು, ಪ್ರಕೃತಿ ಹಾಗೂ ಹವಾಮಾನದ ಮೇಲೆ ಉಂಟು ಮಾಡುತ್ತಿರುವ ಪರಿಣಾಮದಿಂದಾಗಿ ಮಾನವನ ಅಸ್ತಿತ್ವಕ್ಕೆ ಸಂಚಕಾರ ಬಂದೊದಗಿದೆ ಎಂದರು.

ಜೀಜಾಮಾತಾ ವಿದ್ಯಾಸಂಸ್ಥೆಯ ಅಧ್ಯಕ್ಷೆ ಗೌರಾಬಾಯಿ ಮೋಹಿತೆ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣಾ ವೇದಿಕೆ ಅಧ್ಯಕ್ಷ ಗಿರೀಶ ದೇವರಮನಿ, ಸಂಸ್ಥೆಯ ಕಾರ್ಯದರ್ಶಿ ಪದ್ಮಾ ಜಾಧವ್, ಮುಖ್ಯೋಪಾಧ್ಯಾಯ ಎಚ್.ಎಂ.ಪ್ರಕಾಶ್, ಶಿಕ್ಷಕರುಗಳಾದ ಎಂ.ಶಾಂತಲಾದೇವಿ, ಜಿ.ಕೆ.ಅಶ್ವಿನಿ, ಡಿ.ಕೆಂಚಪ್ಪ, ಎಚ್.ನಿರ್ಮಲ ಮತ್ತು ಶಾಲಾ ಮಕ್ಕಳ ಉಪಸ್ಥಿತರಿದ್ದರು.



ದಾವಣಗೆರೆಯಲ್ಲಿ ಕರ್ನಾಟಕ ವಿಜ್ಞಾನ ಪರಿಷತ್, ಜೀಜಾಮಾತಾ ಮಹಿಳಾ ಮಂಡಳಿ ಸಹಯೋಗದಲ್ಲಿ ಪರಿಸರ ದಿನ ಆಚರಿಸಲಾಯಿತು.

Deccan Herald 06-06-2023

# Earth is not inherited by humans alone: DC

## People asked to conserve nature, enhance green landscape



**Deputy Commissioner Shivananda Kapashi watering a sapling to mark the inauguration of world environment day programme in Davangere on Monday. BIET Principal H B Aravind and others are seen.** DH PHOTO

DAVANGERE, DHNS:

Deputy Commissioner Shivananda Kapashi opined that all living creatures are the rightful inheritors of the Earth. It is not meant for mankind alone.

He noted this while speaking after inaugurating World Environment Day programme jointly organised by State Legal Services Authority, District Administration, School Education & Literacy Department, State Pollution Control Board, The Institute of Engineers and Bapuji Institute of Engineering Technology, here on Monday.

He said, biodiversity is deteriorating every year and it would pose a threat to the survival of mankind in the future.

Senior Civil Judge Mahavir Makaranna said, global warming is rising every year and people of countries across the globe must conserve forests. Despite banning plastic, people have continued to use it. All must work together to free the country from plastic use.

Deputy Director of School Education & Literacy Department G R Thippeshappa said, jatha was organised covering 2.5 km. All schools must conduct sapling planting programme.

State Pollution Control Board Regional Officer H Lakshmikanth, Bapuji Institute of Engineering Technology Director Y Vrishabhendrappa, Principal H B Aravind, District Bar Association President L H Arun Kumar, students of various colleges, Civil Engineering Department Head S Suresh and others were present.